# ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

OFFICE OF THE DEPUTY TAHASILDAR, THAMBRAHALLI-583224

ಎ.ವಿಲೇ.ನಂ.ಕಂ.ಪಹಣಿ.ವಿವಾದ/02/2015 16 ದಿನಾಂಕ: ೩೮ .07.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

ವಾದಿ (ಶ್ರೀ/ಶ್ರೀಮತಿ)

ವೆಟ್ಟಿ ಹುಲಿಗೆಮ್ಮ ಗಂಡ ದಂಡೆಪ್ಪ
ಶೀಗೇನಹಳ್ಳಿ ಗ್ರಾಮ ಹಬೊಹಳ್ಳಿ ತಾಲೂಕು

ಪ್ರತಿವಾದಿ (ಶ್ರೀ/ಶ್ರೀಮತಿ)

ಹಾದಿಮನಿ ಯಮನವ್ವ ತಾಯಿ ಬಿದ್ದವ್ವ
ಶೀಗೇನಹಳ್ಳಿ ಗ್ರಾಮ ಹಬೊ ಹಳ್ಳಿ ತಾಲೂಕು

ವ್ಯಾಜ್ಯದ ಜಮೀನಿನ ವಿವರ

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ಶೀಗೇನಹಳ್ಳಿ | 148/ಎ/1ಬಿ & 227/ಎ1/ಎ1 | 3.04 & 1.64 |

*****

ಪೀಠಿಕೆ:

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಶೀಗೇನಹಳ್ಳಿ ಗ್ರಾಮದ ಸ.ನಂ. 148/ಎ/1ಬಿ & 227/ಎ1/ಎ1 ವಿಸ್ತೀರ್ಣ ಕ್ರಮವಾಗಿ 3.04 & 1.64 ಎಕರೆ ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಪೋತಿ ವಾರಸತ್ವದ ಪ್ರಕಾರ ಖಾತೆ ಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್28/2014-15 ರಲ್ಲಿ ಪ್ರತಿವಾದಿಗಳಿಂದ ತಕರಾರು ಬಂದಿರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:11.05.2015 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಮನವಿ ಮೇರೆಗೆ ವ್ಯಾಜ್ಯದ ಜಮೀನು ಮೂಲತಃ ವೆಟ್ಟಿ ಪಕ್ಕೀರವ್ವ ಗಂಡ ರಗಡಪ್ಪ ಶೀಗೇನಹಳ್ಳಿ ಇವರ ಜಮೀನಾಗಿದ್ದು ಸದರಿಯವರಿಗೆ ವೆಟ್ಟಿ ದಂಡೆಪ್ಪ ಇವರು ಏಕೈಕ ಮಗನಾಗಿದ್ದು ಸದರಿಯವರು ದಿನಾಂಕ:21.09.2006 ರಂದು ಮರಣ ಹೊಂದಿದ್ದು ಇವರ ಹೆಂಡತಿಯಾದ ವೆಟ್ಟಿ ಹುಲಿಗೆಮ್ಮ ಇವರು ವ್ಯಾಜ್ಯದ ಜಮೀನಿಗೆ ನೇರ ವಾರಸದಾರರಾಗಿರುತ್ತಾರೆ ಕಾರಣ ಸದರಿ ಜಮೀನನ್ನು ಪೋತಿ ವಾರಸತ್ವದ ಪ್ರಕಾರ ವಾದಿಗಳಾದ ವೆಟ್ಟಿ ಹುಲಿಗೆಮ್ಮ ಗಂಡ ಲೇಟ್ ದಂಡೆಪ್ಪ ಇವರ ಹೆಸರಿಗೆ ಖಾತೆ ಮಾಡುವಂತೆ ಕೋರಿರುತ್ತಾರೆ.

ಪ್ರತಿವಾದಿಗಳು ದಿನಾಂಕ:19.03.2015ರಂದು ಪ್ರಶ್ನಿತ ಹಕ್ಕುಬದಲಾವಣೆಗೆ ಲಿಖಿತ ತಕರಾರನ್ನು ಸಲ್ಲಿಸಿರುತ್ತಾರೆ. ಸದರಿಯವರ ಪ್ರಕಾರ ವಾದಿಗಳು ತಮಗೆ ಸಂಬಂಧಿಕರಾಗಿದ್ದು ಪ್ರಸ್ತುತ ವ್ಯಾಜ್ಯದ ಜಮೀನಿನಲ್ಲಿ ತಮಗೂ ಭಾಗವಿದ್ದು ತಮಗೆ ತಿಳಿಸದೇ ಖಾತೆ ಬದಲಾವಣೆಗೆ ಮನವಿ ಸಲ್ಲಿಸಿರುತ್ತಾರೆ.

ವಾದಿ ಹಾಗೂ ಪ್ರತಿವಾದಿಗಳಿಗೆ ವಿಚಾರಣಾ ನೋಟೀಸ್ ಜಾರಿಯಾಗಿದ್ದರೂ ಸಹ ಉಭಯರು ಸತತವಾಗಿ ವಿಚಾರಣೆಗೆ ಗೈರು ಹಾಜರಾಗಿದ್ದು ಅಲ್ಲದೆ ಅವಶ್ಯ ದಾಖಲೆಗಳನ್ನು ಹಾಜರುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಸಂಬಂಧಿಸಿದ ವಿಳಾಸ ದಾಖಲೆ, ಮರಣ ಪ್ರಮಾಣ ಪತ್ರದಂತಹ ಅವಶ್ಯ ದಾಖಲೆಗಳು ಅತ್ಯಅವಶ್ಯಕವಾಗಿ ಬೇಕಾಗಿರುವುದರಿಂದ ಹಾಗೂ ಉಭಯ ಪಕ್ಷಕಾರರ ಸತತ ಗೈರು ಹಾಜರಾತಿಯಿಂದಾಗಿ ಪ್ರಸ್ತುತ ಪ್ರಕರಣದಲ್ಲಿ ಆಸಕ್ತಿ ಇಲ್ಲವೆಂದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಉಭಯರು ಅಗತ್ಯ ದಾಖಲೆಗಳೊಂದಿಗೆ ಪ್ರದತ್ತ ಪ್ರಾಧೀಕಾರಕ್ಕೆ ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸಿ ಆದೇಶಿಸುವುದು ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡಂತೆ ಆದೇಶ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಶೀಗೇನಹಳ್ಳಿ ಗ್ರಾಮದ ಸ.ನಂ. 148/ಎ/1ಬಿ & 227/ಎ1/ಎ1 ವಿಸ್ತೀರ್ಣ ಕ್ರಮವಾಗಿ 3.04 & 1.64 ಎಕರೆ ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಉಭಯ ಪಕ್ಷಕಾರರು ಅಗತ್ಯ ದಾಖಲೆಗಳೊಂದಿಗೆ ಪ್ರದತ್ತ ಪ್ರಾಧೀಕಾರಕ್ಕೆ ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸುತ್ತಾ ಪ್ರಸ್ತುತ ಪ್ರಕರಣವನ್ನು ಈ ಹಂತದಲ್ಲಿ ಮುಕ್ತಾಯಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: 28.07.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ತಂಬ್ರಹಳ್ಳಿ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.